ದಿನಾಂಕ 23–03–2020ರ ಸೋಮವಾರದಂದು ಪೂರ್ವಾಹ್ನ 11–30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶೈಕ್ಷಣಿಕ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡಾವಳಿ.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಜಿ. ಹೇಮಂತ್ ಕುಮಾರ್ | – ಕುಲಪತಿಗಳು ಹಾಗೂ ಅಧ್ಯಕ್ಷರು. |
| 2. | ಶ್ರೀ ಆರ್. ಮೂಗೇಶಪ್ಪ<br>ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ<br>ಇವರ ಪರವಾಗಿ | – ಸದಸ್ಯರು |
| 3. | ಡಾ. ಎಸ್. ಮದಿಅಳಗನ್ | – ಸದಸ್ಯರು |
| 4. | ಶ್ರೀಮತಿ ಸಹನಾ ಶಿವಪ್ಪ | – ಸದಸ್ಯರು |
| 5. | ಡಾ. ಕೆ.ಕೆ. ವಿಶಾಲಾಕ್ಷಿ | – ಸದಸ್ಯರು |
| 6. | ಶ್ರೀ ದಿನೇಶ್ ಎಂ.ಗಾವಂಕರ್ | – ಸದಸ್ಯರು |
| 7. | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | – ಸದಸ್ಯರು |
| 8. | ಡಾ. ಎಸ್.ಡಿ.ದೊಡ್ಡಚಾರಿ | – ಸದಸ್ಯರು |
| 9. | ಶ್ರೀಮತಿ ಪವಿತ್ರ ವೈ.ಕೆ., | – ಸದಸ್ಯರು |
| 10. | ಡಾ. ಈ.ಸಿ. ನಿಂಗರಾಜಗೌಡ | – ಸದಸ್ಯರು |
| 11. | ಡಾ. ಎಂ.ಎಸ್. ದಾಮೋದರ | – ಸದಸ್ಯರು |
| 12. | ಪ್ರೊ. ಕೆ.ಎಂ. ಮಹದೇವನ್,<br>ಕುಲಸಚಿವರು(ಪರೀಕ್ಷಾಂಗ) | – ಸದಸ್ಯರು |
| 13. | ಪ್ರೊ. ಟಿ.ಎಸ್.ದೇವರಾಜ,<br>ಹಣಕಾಸು ಅಧಿಕಾರಿಗಳು | – ವಿಶೇಷ ಆಹ್ವಾನಿತರು |
| 14. | ಪ್ರೊ. ಆರ್.ಶಿವಪ್ಪ | – ಕುಲಸಚಿವರು ಹಾಗೂ<br>ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಡಾ. ಸೈಯದ್‌ಕಾರುಖ ಮೊಹಿದ್ದೀನ್, ಸಿಂಡಿಕೇಟ್ ಸದಸ್ಯರು.
6. ಶ್ರೀ ಟಿ.ರಾಮಕೃಷ್ಣ, ಪ್ರಾಂಶುಪಾಲರು, ಎ.ಡಿ.ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯಜಿಲ್ಲೆ.

ಮೊದಲಿಗೆ, ಇತ್ತೀಚೆಗೆ ನಿಧನರಾದ ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾದ ಮತ್ತು ರಾಜ್ಯ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳಾಗಿದ್ದ ಶ್ರೀ ಹಂಸರಾಜ್ ಭಾರದ್ವಜ್ ರವರು ನಿಧನರಾದ ಹಿನ್ನೆಲೆಯಲ್ಲಿ ಅವರ ಆತ್ಮಕ್ಕೆ ಶಾಂತಿಕೋರಿ ಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಶ್ರೀಮತಿ ಪವಿತ್ರ ವೈ.ಕೆ., ವಿಜಯನಗರ, ಮೈಸೂರು ಇವರನ್ನು ಸ್ವಾಗತಿಸಿ ಪರಿಚಯಿಸಿದರು.

ಹಾಗೂ ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಶ್ರೀಮತಿ ಸಿಂಧು ಸುರೇಶ, ಟಿ.ಕೆ.ಬಡಾವಣೆ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

<table>
<tr><td>ವಿಷಯ ಸಂಖ್ಯೆ: I</td><td>ದಿನಾಂಕ 15–02–2020ರಂದು ನಡೆದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td>ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯಲ್ಲಿನ ವಿಷಯ ಸಂಖ್ಯೆ 2.2, 2.3 ಹಾಗೂ ಇತರೆ ವಿಷಯಗಳಲ್ಲಿನ ಕ್ರಮಸಂಖ್ಯೆ 5ಕ್ಕೆ ಸಂಬಂಧಪಟ್ಟ ತೀರ್ಮಾನಗಳ ಬದಲಿಗೆ ತಿದ್ದುಪಡಿ ಮಾಡಲಾಗಿರುವುದನ್ನು ವಿವರಿಸಿ ಸಭೆಯ ಗಮನಕ್ಕೆ ತಂದು ತದನಂತರ ಸಿಂಡಿಕೇಟ್‌ನ ಒಪ್ಪಿಗೆಯ ಮೇರೆಗೆ ಈ ಕೆಳಕಂಡ ತಿದ್ದುಪಡಿಗಳನ್ನೊಳಗೊಂಡಂತೆ ದಿನಾಂಕ 15–02–2020ರಂದು ನಡೆದ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.
<table>
<tr><th>ವಿಷಯ ಸಂಖ್ಯೆ</th><th>ಈಗಾಗಲೇ ದಾಖಲಿಸಲಾದ ತೀರ್ಮಾನ</th><th>ತಿದ್ದುಪಡಿ</th></tr>
<tr><td>2.2</td><td>ಶ್ರೀ. ರಾಜಣ್ಣ ಎಲ್., ಸಂಶೋಧಕರು ಇವರು ಡಾ. ಕೆ.ಎನ್.ಗಂಗಾನಾಯಕ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿರುವುದನ್ನು ಹಾಗೂ ಈಗಾಗಲೇ ದಿನಾಂಕ 22–07–2020 ರೊಳಗೆ ಸಂಶೋಧನಾಕಾರ್ಯ ಪೂರ್ಣ–ಗೊಳಿಸಲು ಸದರಿ ವಿದ್ಯಾರ್ಥಿಗೆ ರೂ. 25,000/–ಗಳ ಬದಲಿಗೆ ರೂ. 50,000/– ದಂಡಶುಲ್ಕವನ್ನು ವಿಧಿಸಲು ತೀರ್ಮಾನಿಸಿತು.<br>ಮುಂದುವರೆದು, ಏಳು ವರ್ಷಗಳು ಪೂರೈಸಿದ ಸಂಶೋಧನಾ ವಿದ್ಯಾರ್ಥಿಗಳ ಅವಧಿಯನ್ನು ಮುಂದುವರೆಸುವಂತೆ ವಿಷಯ ಮಂಡಿಸಬಾರದೆಂದು ಹಾಗೂ ಈ ಬಗ್ಗೆ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸುವಂತೆ ಸುತ್ತೋಲೆಯನ್ನು ಹೊರಡಿಸಲು ಸಭೆಯು ತೀರ್ಮಾನಿಸಿತು.</td><td>ಈ ವಿಷಯಕ್ಕೆ ಸಂಬಂಧಿಸಿದಂತೆ, ಸಿಂಡಿಕೇಟ್ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಏಳು ವರ್ಷಗಳು ಪೂರೈಸಿದ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೂ ಜೂನ್ 2020ರವರೆಗೆ ಅವಧಿ ವಿಸ್ತರಣೆ ಮಾಡಬೇಕೆಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸ–ಲಾಯಿತು. ಜೂನ್ 2020ರ ನಂತರ ಮತ್ತೊಮ್ಮೆ ಸಂಶೋಧನಾ ಕಾರ್ಯ ವಿಸ್ತರಣೆ ಮಾಡುವಂತೆ ಶಿಫಾರಸ್ಸು ಸಲ್ಲಿಸಬಾರದೆಂದೂ ಎಲ್ಲಾ ಮಾರ್ಗದರ್ಶಕರುಗಳಿಗೆ ಕಡ್ಡಾಯ–ವಾಗಿ ಸುತ್ತೋಲೆಯನ್ನು ಹೊರಡಿಸುವಂತೆ ಸಭೆಯು ತೀರ್ಮಾನಿಸಿತು.</td></tr>
</table>
</td></tr>
</table>

| | | |
|---|---|---|
| 2.3 | ದಿನಾಂಕ 16–01–2020ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿ.ವಿ. ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರನ್ನೊಳಗೊಂಡ ಸಭೆಯ ನಡವಳಿ ಹಾಗೂ ವಿದ್ಯಾರ್ಥಿನಿಲಯಗಳ ಕೈಪಿಡಿ'ಯನ್ನು ಸಿಂಡಿಕೇಟ್ ಅನುಮೋದಿಸಿತು. | ಈ ವಿಷಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯಲ್ಲಿ<br>– ಮುಂದಿನ ಶೈಕ್ಷಣಿಕ ಸಾಲಿನಿಂದ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಪೂರ್ಣಕಾಲಿಕವಾಗಿ ವಾರ್ಡನ್‌ಗಳನ್ನು ನೇಮಕ ಮಾಡಬೇಕೆಂದು ತೀರ್ಮಾನಿಸಲಾಯಿತು.<br>– ವಿಶ್ವವಿದ್ಯಾನಿಲಯದಲ್ಲಿ Centralized/ Common Kitchen ವ್ಯವಸ್ಥೆ ಜಾರಿಗೆ ತಂದು ಒಂದೇ ಕಡೆ ಆಹಾರವನ್ನು ತಯಾರಿಸಿ, ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡುವ ವ್ಯವಸ್ಥೆ ಅಥವಾ ಟೆಂಡರ್ ವ್ಯವಸ್ಥೆಯನ್ನು ಮುಂದುವರಿಸಬೇಕೋ ಅಥವಾ ಪ್ರಸಕ್ತ ವ್ಯವಸ್ಥೆಯನ್ನೇ ಮುಂದುವರಿಸಬೇಕೋ ಎಂಬುದರ ಬಗ್ಗೆ ವರದಿ ನೀಡಲು "ಸಿಂಡಿಕೇಟ್ ಉಪಸಮಿತಿ"ಯನ್ನು ರಚಿಸಲು ತೀರ್ಮಾನಿಸಲಾಯಿತು.<br>– ಮುಂದಿನ ಶೈಕ್ಷಣಿಕ ವರ್ಷದಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ವಿತರಿಸುವಂತೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ತೆರವುಗೊಳಿಸುವಂತೆ ಕ್ರಮಕೈಗೊಳ್ಳುವುದರ ಬಗೆಗೆ ಉಪಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. |
| **ಇತರೆ ವಿಷಯ –5** | ಡಾ. ಈ.ಸಿ. ನಿಂಗರಾಜ್‌ಗೌಡ, ಸಿಂಡಿಕೇಟ್ ಸದಸ್ಯರು ಇವರು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಗುರುತಿನ ಚೀಟಿಯನ್ನು ವಿತರಿಸಬೇಕೆಂದು ಕೋರಿದರು. | ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಗುರುತಿನ ಚೀಟಿಯನ್ನು ವಿತರಿಸಬೇಕೆಂದು ತೀರ್ಮಾನಿಸಲಾಯಿತು. |

| | |
|---|---|
| **2020/3.1** | Massive Open Online Course, ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸಿರುವ ಮತ್ತು ದಕ್ಷಿಣ ಭಾರತೀಯ ಹಾಗೂ ಅಪರಾಧಶಾಸ್ತ್ರ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |

| | |
|---|---|
| **ತೀರ್ಮಾನ** | ಶೈಕ್ಷಣಿಕ ಹಿತದೃಷ್ಟಿಯಿಂದ Massive Open Online Course, ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸಿರುವ ಮತ್ತು ದಕ್ಷಿಣ ಭಾರತೀಯ ಹಾಗೂ ಅಪರಾಧಶಾಸ್ತ್ರ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿ ವಿಶ್ವವಿದ್ಯಾನಿಲಯವು ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2020/3.2** | ಶ್ರೀ ವಿ. ಎಸ್. ಮಧುಸೂದನ್ ಚಿನ್ನದ ಪದಕ ದತ್ತಿಯ ಮೂಲ ಷರತ್ತನ್ನು ತಿದ್ದುಪಡಿ ಮಾಡುವ ಬಗ್ಗೆ. |
| **ತೀರ್ಮಾನ** | ವಿ.ವಿ.ಅಧಿಸೂಚನೆ ಸಂ.ಜಿ.ಎಲ್.3/697/2011–12, ದಿನಾಂಕ 31.03.2012ರ ಅನ್ವಯ, ಶ್ರೀ ವಿ.ಎಸ್.ಮಧುಸೂಧನ್ ಚಿನ್ನದ ಪದಕ ದತ್ತಿಯನ್ನು Master of Fine Arts ಸ್ನಾತಕೋತ್ತರ ಪದವಿಯಲ್ಲಿ Sculpture ಎಂಬ ಪತ್ರಿಕೆಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಚಿನ್ನದ ಪದಕವನ್ನು Master of Fine Arts ಸ್ನಾತಕೋತ್ತರ ಪದವಿಯ ಬದಲು **Bachelor of Fine Arts ಸ್ನಾತಕ ಪದವಿಯ Sculpture** ಎಂಬ ಪತ್ರಿಕೆಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ವಿತರಿಸಲು ದಾನಿಗಳು ಕೋರಿರುವುದರಿಂದ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಸಿಂಡಿಕೇಟ್ ಅನುಮೋದಿಸಿತು. |

| ಕ್ರ. ಸಂ. | ಮೂಲ ಷರತ್ತು | ತಿದ್ದುಪಡಿ ಷರತ್ತು |
|---|---|---|
| 1 | Master of Fine Arts ಸ್ನಾತಕೋತ್ತರ ಪದವಿಯಲ್ಲಿ Sculpture ಎಂಬ ಪತ್ರಿಕೆಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ನೀಡಲಾಗುತ್ತಿತ್ತು. | Bachelor of Fine Arts ಸ್ನಾತಕ ಪದವಿಯಲ್ಲಿ Sculpture ಎಂಬ ಪತ್ರಿಕೆಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ವಿತರಿಸುವುದು |

| | |
|---|---|
| **2020/3.3** | ಅಜಾಗರೂಕತೆಯಿಂದ ಮೌಲ್ಯಮಾಪನ ಮಾಡುವ ಮೌಲ್ಯಮಾಪಕರುಗಳಿಗೆ ವಿಧಿಸುವ ದಂಡ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ. |
| **ತೀರ್ಮಾನ** | ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಮೌಲ್ಯಮಾಪಕರು ಅಜಾಗರೂಕತೆಯಿಂದ ಇತ್ತೀಚೆಗೆ ತಪ್ಪುಗಳನ್ನು ಹೆಚ್ಚಾಗಿ ಎಸಗುತ್ತಿರುವುದು ಕಂಡುಬರುತ್ತಿರುವುದರಿಂದ ಇನ್ನು ಮುಂದೆ ಮೌಲ್ಯಮಾಪಕರು ಜಾಗರೂಕರಾಗಿರಲು ಹಾಗೂ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕೆನ್ನುವ ಉದ್ದೇಶದಿಂದ ಪ್ರಸಕ್ತ ವಿಧಿಸುತ್ತಿರುವ ರೂ. 500/– ದಂಡ ಶುಲ್ಕದ ಬದಲಿಗೆ ವಿಧಿಸಬಹುದಾದ ದಂಡಶುಲ್ಕದ ಮಾದರಿಯನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಸಿಂಡಿಕೇಟ್ ತೀರ್ಮಾನಿಸಿತು<br>1. ಮೊದಲ ಬಾರಿಗೆ ತಪ್ಪಾದಲ್ಲಿ ರೂ. 1,000/– ದಂಡ ಶುಲ್ಕ ವಿಧಿಸುವುದು.<br>2. ಎರಡನೇ ಬಾರಿಗೆ ತಪ್ಪಾದಲ್ಲಿ ರೂ. 2,000/– ದಂಡ ಶುಲ್ಕ ವಿಧಿಸುವುದು.<br>3. ಮೂರನೇ ಬಾರಿಗೆ ತಪ್ಪಾದಲ್ಲಿ ಸದರಿ ಮೌಲ್ಯಮಾಪಕರುಗಳನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸಿ, ಒಂದು ವರ್ಷದ ಅವಧಿಗೆ ಮೌಲ್ಯಮಾಪನ ಕಾರ್ಯದಿಂದ ಹೊರಗಿಡುವುದು. |

<table>
<tr><td>2020/3.4</td><td>ಸಹಜ ಮಾರ್ಗ ಸ್ಪಿರಿಚುಯಲ್ ಫೌಂಡೇಶನ್, ಸಂಶೋಧನಾ ಕೇಂದ್ರ, ಮೈಸೂರು ಇವರ ಸಂಸ್ಥೆಯ ಹೆಸರಿನೊಂದಿಗೆ Heartfulness Research Centre ಎಂದು ಸೇರ್ಪಡೆಗೊಳಿಸುವ ಸಂಬಂಧ ಅನುಮೋದನೆ ಕೋರಿರುವ ಬಗ್ಗೆ.</td></tr>
<tr><td>ತೀರ್ಮಾನ</td><td>ಸಹಜ ಮಾರ್ಗ ಸ್ಪಿರಿಚುಯಲ್ ಫೌಂಡೇಶನ್, ಮೈಸೂರು ಇವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲಾಗಿರುವುದನ್ನು ಮತ್ತು ಇವರು ಸಂಸ್ಥೆಯ ಹೆಸರಿನೊಂದಿಗೆ Heartfulness Research Centre ಎಂದು ಸೇರ್ಪಡೆಗೊಳಿಸುವಂತೆ ಕೋರಿ ನಿಯಮಾನುಸಾರ ಪಾವತಿಸಬೇಕಾಗಿದ್ದ ನಿಗದಿತ ಶುಲ್ಕ ರೂ. 41,570/–ಗಳನ್ನು ಪಾವತಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಕೆಳಕಂಡಂತೆ ಪರಿಷ್ಕೃತ ಆದೇಶ ಹೊರಡಿಸಲು ತೀರ್ಮಾನಿಸಿತು.
<table>
<tr><th>Previous Name and Address</th><th>Revised Name and Address</th></tr>
<tr><td>Sahaj Marg Spirituality Foundation, 1615, Maidanahalli Cross Road, Hunsur Road Opposite to Industrial Area, Next to MYRA School of Business, Yelavala Mysuru.</td><td>Sahaj Marg Spirituality Foundation, Heartfulness Research Centre, 1615, Maidanahalli Cross Road, Hunsur Road, Opposite to Industrial Area, Next to MYRA School of Business Yelavala, Mysuru.</td></tr>
</table>
</td></tr>
<tr><td>2020/3.5</td><td>ಶ್ರೀಮತಿ ಭವ್ಯರಾಣಿ ರವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕ ಮಾಡುವ ಬಗ್ಗೆ.</td></tr>
<tr><td></td><td>ಶ್ರೀಮತಿ ಭವ್ಯರಾಣಿ, ಕೋ/o ಲೇಟ್ ಮೋಹನ್ ಕುಮಾರ್ ಎಂ., ಇವರು ಅನುಕಂಪದ ಆಧಾರದ ಮೇಲೆ ಪ್ರಥಮ ದರ್ಜೆ ಗುಮಾಸ್ತರಾಗಿ ನೇಮಕ ಮಾಡಿಕೊಳ್ಳುವಂತೆ ಕೋರಿರುವ ಮನವಿಯಂತೆ, ಉದ್ಯೋಗ ನೀಡುವ ಸಂಬಂಧ ದಿನಾಂಕ 19–11–2019ರಂದು ಸ್ಪಷ್ಟೀಕರಣ ಕೋರಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿತ್ತು. ಈ ಸಂಬಂಧ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ ಇಲಾಖೆ), ಬೆಂಗಳೂರು ಇವರು ಸದರಿಯವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹಾಗೂ ಸಿಂಡಿಕೇಟ್ ನೇಮಕಾತಿ ಪ್ರಾಧಿಕಾರವಾಗಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಅನುಕಂಪದ ಆಧಾರದ ನೇಮಕಾತಿಗೆ ರಚಿಸಿಕೊಂಡಿರುವ ಪರಿನಿಯಮಗಳನ್ವಯ ಅಗತ್ಯ ಕ್ರಮವಹಿಸುವಂತೆ ತಿಳಿಸಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು.<br><br>ಡಾ. ಈ.ಸಿ. ನಿಂಗರಾಜ್ ಗೌಡ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಸೇವೆಯಲ್ಲಿರುವಾಗಲೇ ಮರಣ ಹೊಂದಿದಾಗ ಅವರ ಕುಟುಂಬದ ಅವಲಂಬಿತರಿಗೆ ಸರ್ಕಾರದ ಸುತ್ತೋಲೆ ಸಂ. ಸಿಆಸುಇ 105 ಸೇಅನೇ 2017, ದಿನಾಂಕ 27.10.2017ರಲ್ಲಿ ತಿಳಿಸಿರುವಂತೆ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರಿಗೆ ಗ್ರೂಪ್ "ಸಿ" ಹುದ್ದೆಯಾದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು, ಪ್ರಸ್ತುತ ಚಾಲ್ತಿಯಲ್ಲಿರುವ</td></tr>
</table>

| | |
|---|---|
| | ಅಧಿನಿಯಮಗಳಿಗೆ ಸೂಕ್ತ ಮಾರ್ಪಾಡು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಕೋರಿದರು. |
| **ತೀರ್ಮಾನ** | ಕೂಲಂಕಷವಾಗಿ ಚರ್ಚಿಸಿದ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಸೇವೆಯಲ್ಲಿರುವಾಗಲೇ ಮರಣ ಹೊಂದಿದಾಗ ಅವರ ಕುಟುಂಬದ ಅವಲಂಬಿತರಿಗೆ ಉದ್ಯೋಗ ನೀಡಲು ರಚಿಸಲಾದ ಅಧಿನಿಯಮದ ಪ್ರಕರಣ 6(ಬಿ) ಅನ್ವಯ ಶ್ರೀಮತಿ ಭವ್ಯರಾಣಿ ಕೋಂ ಲೇ॥ ಮೋಹನ್ ಕುಮಾರ್, ಇವರಿಗೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಲ್ಲಿ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು.<br><br>ಮತ್ತು ಸರ್ಕಾರದ ಇತ್ತೀಚಿನ ಸುತ್ತೋಲೆ ಹಾಗೂ ಇತರೆ ನಿಯಮಗಳನುಸಾರ ವಿದ್ಯಾರ್ಹತೆಗನುಗುಣವಾಗಿ ಉದ್ಯೋಗ ನೀಡಲು ಪ್ರಸ್ತುತ ಚಾಲ್ತಿಯಲ್ಲಿರುವ ಅಧಿನಿಯಮಕ್ಕೆ ಸೂಕ್ತ ಬದಲಾವಣೆಗಳನ್ನು ಅಳವಡಿಸಿ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಹ ತೀರ್ಮಾನಿಸಿತು. |
| **2020/3.6** | Reconstitution of the panel of Advocates and to enhance the fee structure – vide Sec.29(2)(p) of KSU Act, 2000-Reg. |
| | ಡಾ. ಈ.ಸಿ. ನಿಂಗರಾಜ್‌ಗೌಡ, ಮಾನ್ಯ ಸಿಂಡಿಕೇಟ್ ಸದಸ್ಯರು, ಇವರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಎಷ್ಟು ಪ್ರಕರಣಗಳು ಉಚ್ಚನ್ಯಾಯಾಲಯ ಮತ್ತು ಸ್ಥಳೀಯ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಿವೆ ಹಾಗೂ ಬಾಕಿ ಉಳಿದಿವೆ ಎಂಬುದರ ಬಗ್ಗೆ ವಿವರವನ್ನು ಕೋರಿದರು.<br><br>ಮಾನ್ಯ ಕುಲಪತಿಗಳು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸಲ್ಲಿಸಲಾಗುವುದೆಂದರು. |
| **Decision:** | The Syndicate has approved the reconstitution of the panel of Advocates with inclusion of new Advocates and for the proposal of fixation of revised professional fee. |
| **2020/3.7** | ಶ್ರೀ ಜಿ. ರವಿ, ಅಸಿಸ್ಟೆಂಟ್ ಆರ್ಕಿವಿಸ್ಟ್ ಇವರಿಗೆ 7ನೇ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಜಿ. ರವಿ, ಅಸಿಸ್ಟೆಂಟ್ ಆರ್ಕಿವಿಸ್ಟ್ ಇವರಿಗೆ ಈ ಹಿಂದೆ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ ಮತ್ತು ಸರ್ಕಾರದ ಅನುಮತಿಯೊಂದಿಗೆ ಯು.ಜಿ.ಸಿ. ವೇತನ ಶ್ರೇಣಿ ವಿಸ್ತರಿಸಲಾಗಿರುವುದನ್ನು ಹಾಗೂ ಈ ಸಂಬಂಧ ದಿನಾಂಕ 01–01–2016ರಿಂದ ಜಾರಿಗೊಳಿಸಿರುವ 7ನೇ ಪರಿಷ್ಕೃತ ವೇತನ ಶ್ರೇಣಿಯನ್ನು ಸಹ ವಿಸ್ತರಿಸಲು ಸರ್ಕಾರದ ಅನುಮತಿ ಕೋರಿ ದಿ. 18.11.2019ರಂದು ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಬರೆಯಲಾಗಿದ್ದ ಪತ್ರಕ್ಕೆ ಸರ್ಕಾರವು ತನ್ನ ಪತ್ರ ಸಂಖ್ಯೆ: ಇಡಿ 136 ಯುಎಂವಿ 2019 ದಿನಾಂಕ 14–01–2020ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 483 ಯುಎನ್ಇ 2018 ದಿನಾಂಕ 16–03–2019 ಕಂಡಿಕೆ 2(ಕವರೇಜ್)ರಲ್ಲಿನ ಷರತ್ತುಗಳು ಪೂರೈಸಿರುವ ಬಗ್ಗೆ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿರುವುದನ್ನು ಗಮನಿಸಿದ ಸಿಂಡಿಕೇಟ್, ಸರ್ಕಾರದ ನಿರ್ದೇಶನದಂತೆ ಸದರಿ ಸರ್ಕಾರದ ಆದೇಶದ ಕಂಡಿಕೆ 2(ಕವರೇಜ್)ರಲ್ಲಿನ ಷರತ್ತುಗಳು ಶ್ರೀ ಜಿ.ರವಿ. ಅಸಿಸ್ಟೆಂಟ್ ಆರ್ಚಿವಿಸ್ಟ್, ಇವರ ಪ್ರಕರಣಕ್ಕೆ ಅನ್ವಯಿಸುವುದಿಲ್ಲವಾದ್ದರಿಂದ ಈ ಹಿಂದಿನಂತೆ ವೇತನಶ್ರೇಣಿ ಬದಲಾದಂತೆ ಆಯಾ ವೇತನಶ್ರೇಣಿಗನುಗುಣವಾಗಿ ದಿನಾಂಕ 01–01–2016ರಿಂದ ಜಾರಿಗೊಳಿಸಿರುವ 7ನೇ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/3.8** | ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ 4 (ಜಿ) ಅಡಿಯಲ್ಲಿ ವಿನಾಯತಿಗೆ ಸಂಬಂಧಿಸಿದಂತೆ |

| | |
|---|---|
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯವು ವಿವಿಧ ಪದವಿ ಪರೀಕ್ಷೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯ ಅನ್ವಯ ಸಕಾಲದಲ್ಲಿ ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಹಾಗೂ ಪರೀಕ್ಷೆಗಳ ಪಾವಿತ್ರ್ಯತೆ ಮತ್ತು ಗೌಪ್ಯತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮನ 1999ರ 4(ಜಿ) ಅಡಿಯಲ್ಲಿ ಈ ಹಿಂದೆ ಸರ್ಕಾರ ನೀಡಿರುವ ವಿನಾಯಿತಿಯಂತೆ ಯಥಾಸ್ಥಿತಿಯಲ್ಲೇ ಮುಂದುವರೆಸಿಕೊಂಡು ಹೋಗಲು ತೀರ್ಮಾನಿಸಿತು ಹಾಗೂ ಪುನರ್ ನವೀಕರಿಸುವ ಬಗ್ಗೆ ಸರ್ಕಾರಕ್ಕೆ ಮತ್ತೊಮ್ಮೆ ಪತ್ರವನ್ನು ಬರೆಯಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2020/3.9** | ಶ್ರೀ ನರಸಿಂಹ ವೈ, ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ನಿವೃತ್ತಿಗೊಳಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ನರಸಿಂಹ ವೈ., ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಸೇವಾ ದಾಖಲು ಪುಸ್ತಕವನ್ನು ಪ್ರಾರಂಭಿಸುವ ಹಂತದಲ್ಲಿ ಸದರಿಯವರ ಜನ್ಮ ದಿನಾಂಕವನ್ನು ತಪ್ಪಾಗಿ ನಮೂದಿಸಿರುವುದು ಪರಿಶೀಲನೆಯಿಂದ ಕಂಡು ಬಂದಿರುವ ಹಿನ್ನೆಲೆಯಲ್ಲಿ ಸದರಿಯವರು ತಮ್ಮ ಜನ್ಮ ದಿನಾಂಕ 27–07–1955 ಎಂದು ಒಪ್ಪಿಕೊಂಡಿರುವುದರಿಂದ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ವಿ.ವಿ.ಆದೇಶ ಸಂಖ್ಯೆ: ಇಟಿ.4/397/2019–20, ದಿನಾಂಕ 18–03–2020ರಲ್ಲಿ ಆದೇಶ ಹೊರಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ಆದೇಶಿಸಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಅನುಸಮರ್ಥಿಸಿತು.<br><br>1. ಶ್ರೀ ನರಸಿಂಹ ವೈ., ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಈಗಾಗಲೇ 64 ವರ್ಷ ವಯೋಮಾನ ತಲುಪಿರುವುದರಿಂದ ತಕ್ಷಣದಿಂದ ಜಾರಿಗೆ ಬಂದಂತೆ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಲು.<br>2. ಸದರಿಯವರಿಗೆ ದಿ. 31.07.2015ಕ್ಕೆ 60 ವರ್ಷಗಳ ವಯೋಮಾನ ತಲುಪಿರುವುದರಿಂದ ಅಂದು ಚಾಲ್ತಿಯಲ್ಲಿದ್ದ ನಿಯಮಗಳನುಸಾರ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿ ಪಾವತಿಸತಕ್ಕದ್ದು.<br>3. ಶ್ರೀಯುತರು ದಿನಾಂಕ 01–08–2015 ರಿಂದ ಇಲ್ಲಿಯವರೆಗೆ ವಾಹನ ಚಾಲಕರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿರುವುದರಿಂದ ಸದರಿಯವರಿಗೆ ಪಾವತಿಸಿರುವ ವೇತನ ಭತ್ಯೆಗಳನ್ನು ಕಡಿತಗೊಳಿಸತಕ್ಕದ್ದಲ್ಲ.<br>4. ಸದರಿರವರಿಗೆ ದಿನಾಂಕ 01–08–2015 ರಿಂದ ಇಲ್ಲಿಯವರೆಗೆ ವೇತನ ಪಾವತಿಸಿರುವುದರಿಂದ ಈ ಅವಧಿಗೆ ಪಿಂಚಣಿ(ನಿವೃತ್ತಿ ವೇತನ)ಯನ್ನು ಪಾವತಿಸತಕ್ಕದ್ದಲ್ಲ. ಸೇವೆಯಿಂದ ಬಿಡುಗಡೆಗೊಳಿಸಿದ ಮರು ದಿನಾಂಕದಿಂದ ಪಿಂಚಣಿಯನ್ನು ಪಾವತಿಸತಕ್ಕದ್ದು. |
| **2020/3.10** | ಶ್ರೀ ರಾಗಿಜಡಿಮೂರ್ತಿ, ಮಾಲಿಕ್ಯೂಲರ್ ಬಯಾಲಜಿ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರಿಗೆ ಪಿಹೆಚ್.ಡಿ ಮಹಾ ಪ್ರಬಂಧವನ್ನು ಸಲ್ಲಿಸಲು 06 ತಿಂಗಳು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |

| | |
|---|---|
| **ತೀರ್ಮಾನ** | ಶ್ರೀ ರಾಗಿ ಜಡಿಮೂರ್ತಿ, ಮಾಲಿಕ್ಯೂಲರ್ ಬಯಾಲಜಿ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರು ಡಾ. ಎನ್.ಎಸ್.ದೇವಕಿಯವರ ಮಾರ್ಗದರ್ಶನದಲ್ಲಿ ಸಂಶೋಧನಾ ಕಾರ್ಯ ನಿರ್ವಹಿಸುತ್ತಿದ್ದು, ಇವರ ಪಿ.ಹೆಚ್.ಡಿ. ಸಂಶೋಧನಾ ಅವಧಿಯು ದಿನಾಂಕ 01–03–2020ಕ್ಕೆ 07 ವರ್ಷಗಳು ಪೂರ್ಣಗೊಂಡಿದ್ದು, ಮಹಾಪ್ರಬಂಧವನ್ನು ಸಲ್ಲಿಸಲು 06 ತಿಂಗಳುಗಳ ಕಾಲ ಹೆಚ್ಚುವರಿ ಅವಧಿಯ ವಿಸ್ತರಣೆಯನ್ನು ಕೋರಿರುವುದು ಪಿಹೆಚ್.ಡಿ. ನಿಯಮಾವಳಿಯನ್ವಯ ವಿಳಂಬವಾಗಿರುವುದರಿಂದ, ಸದರಿಯವರಿಗೆ ಕಾರಣ ಕೇಳುವ ನೋಟೀಸ್ ಅನ್ನು ನೀಡಿ, ಅವರು ನೀಡುವ ಉತ್ತರದೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿ ವಿಷಯವನ್ನು ಮುಂದೂಡಲು ಸಿಂಡಿಕೇಟ್ ನಿರ್ಮಾನಿಸಿತು. |
| **2020/3.11** | ಅಧ್ಯಾಪಕೇತರ ಉದ್ಯೋಗಿಗಳು ವಿದೇಶಕ್ಕೆ ತೆರಳಲು/ಹೋಗಿಬಂದಿರುವುದಕ್ಕೆ ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಕಂಡ ಉದ್ಯೋಗಿಗಳು ವೈಯಕ್ತಿಕವಾಗಿ ಅವರುಗಳ ಹಕ್ಕಿನಲ್ಲಿರುವ ರಜೆಗಳನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಈಗಾಗಲೇ ವಿದೇಶ ಪ್ರವಾಸಕ್ಕೆ ಹೋಗಿಬಂದಿರುವುದಕ್ಕೆ ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು |

| ಕ್ರ.ಸಂ | ಉದ್ಯೋಗಿಯ ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ | ಕಾರ್ಯನಿರ್ವಹಿಸುತ್ತಿರುವ ವಿಭಾಗ/ಕಛೇರಿ | ವಿದೇಶದ ಹೆಸರು | ರಜಾ ಅವಧಿ |
|---|---|---|---|---|
| 1 | ಚಿಕ್ಕಜ್ಯೋತಿ ಪಿ, ಅಧೀಕ್ಷಕರು | ಪರೀಕ್ಷಾ ವಿಭಾಗ | ದುಬೈ | 06–02–2020 ರಿಂದ 12–02–2020 ರವರೆಗೆ |
| 2 | ರಾಧಮ್ಮ ಆರ್. ಶೀಘ್ರಲಿಪಿಗಾರರು | ಆಡಳಿತ ವಿಭಾಗ | ದುಬೈ | 06–02–2020 ರಿಂದ 12–02–2020 ರವರೆಗೆ |
| 3 | ರತ್ನಾವತಿ, ಕಂಪ್ಯೂಟರ್ ಆಪರೇಟರ್ | ಹಣಕಾಸು ವಿಭಾಗ | ದುಬೈ | 06–02–2020 ರಿಂದ 12–02–2020 ರವರೆಗೆ |

| | |
|---|---|
| **2020/3.11** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು |
| **ತೀರ್ಮಾನ** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳ ಅನ್ವಯ ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ, ಸದರಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯಲು ಹಾಗೂ ಶುಲ್ಕವನ್ನು ಪಾವತಿಸಲು ಅನುಕೂಲವಾಗುವಂತೆ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ |

| | |
|---|---|
| | ಸ್ಥಿರೀಕರಿಸಿತು. |
| **2020/3.13** | 2019–20ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| | ಡಾ. ಈ.ಸಿ. ನಿಂಗರಾಜ್ ಗೌಡ ರವರು ಮಾತನಾಡಿ, ಈಜುಕೊಳದ ಅಭಿವೃದ್ದಿಗೆ ಹೆಚ್ಚು ಒತ್ತು ನೀಡುವ ದೃಷ್ಟಿಯಿಂದ ಹೊಸದಾಗಿ ನುರಿತ ಯುವ ಕೋಚ್‌ಗಳನ್ನು ನೇಮಕ ಮಾಡಿಕೊಳ್ಳಬೇಕು ಮತ್ತು ಮಾನ್ಯ ಕುಲಪತಿ ಹಾಗೂ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ಒಂದು ತಂಡವನ್ನು ರಚಿಸಿ ಈಜುಕೊಳಕ್ಕೆ ಆಗಾಗ್ಗೆ ಭೇಟಿ ನೀಡಿ ಈಜುಕೊಳದ ಸಮಗ್ರ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಿದರು. |
| **ತೀರ್ಮಾನ** | 2019–20ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡಾವಳಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಈ ಕೆಳಕಂಡ ನಿರ್ಣಯಗಳೊಂದಿಗೆ ನಡಾವಳಿಯನ್ನು ಅನುಮೋದಿಸಿತು.<br><br>1. ಡೀನರು, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಹಾಗೂ 02 ಮಂದಿ ಸಿಂಡಿಕೇಟ್ ಸದಸ್ಯರುಗಳನ್ನೊಳಗಂಡಂತೆ ಕ್ರೀಡಾ ಸಮಿತಿಯನ್ನು ರಚಿಸುವುದು.<br>2. ಈಜುಕೊಳದ ಅಭಿವೃದ್ದಿಗೆ ಹೆಚ್ಚು ಒತ್ತು ನೀಡುವುದು ಹಾಗೂ ಹೊಸದಾಗಿ ನುರಿತ ಯುವ ಕೋಚ್‌ಗಳನ್ನು ನೇಮಕ ಮಾಡಿಕೊಳ್ಳುವುದು.<br>3. ಮಾನ್ಯ ಕುಲಪತಿ ಹಾಗೂ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡ ಒಂದು ತಂಡವನ್ನು ರಚಿಸಿಕೊಂಡು, ಈಜುಕೊಳಕ್ಕೆ ಆಗಾಗ್ಗೆ ಭೇಟಿ ನೀಡಿ ಈಜುಕೊಳದ ಸಮಗ್ರ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುವುದು.<br>4. ಕ್ರಮ.ಸಂ.2ರಲ್ಲಿ 2020–21ನೇ ಸಾಲಿನ ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಪ್ರಸ್ತಾವನೆ ಮಾಡಿರುವ ಅಂದಾಜು ಆಯವ್ಯಯ ವೆಚ್ಚ ರೂ. 1,61,44,000/–ಗಳಿಗೆ ಪೂರ್ಣ ವಿವರಗಳನ್ನು ಒದಗಿಸುವುದು ಹಾಗೂ 2020ನೇ ಸಾಲಿನ 27ನೇ ಬೇಸಿಗೆ ತರಬೇತಿ ಶಿಬಿರ ನಡೆಸಲು ಮಂಡಿಸಿದ್ದ ಅಂದಾಜು ಆಯವ್ಯಯ ರೂ. 6,22,000/–ಗಳಿಗೆ ಬೇಸಿಗೆ ಶಿಬಿರದಲ್ಲಿ ನಡೆಸುವ ಕ್ರೀಡಾ ಚಟುವಟಿಕೆಗಳ ವಿವರಗಳನ್ನು ಒದಗಿಸಲಾಗುವುದು. |
| **2020/3.14** | ಸಾಧನ ಸಂಗಮ ಟ್ರಸ್ಟ್(ರಿ), ಚನ್ನಪಟ್ಟಣ ತಾಲ್ಲೂಕು, ಕರ್ನಾಟಕ, ಇವರಿಗೆ ಹೊಸದಾಗಿ Performing Arts ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| | ಡಾ. ಈ.ಸಿ. ನಿಂಗರಾಜ್ ಗೌಡ ರವರು ಮಾತನಾಡಿ, ಸಾಧನ ಸಂಗಮ ಟ್ರಸ್ಟ್(ರಿ), ಚನ್ನಪಟ್ಟಣ ತಾಲ್ಲೂಕು, ಕರ್ನಾಟಕ, ಇವರಿಗೆ ಹೊಸದಾಗಿ Performing Arts ವಿಷಯಗಳಲ್ಲಿ ಪಿಹೆಚ್.ಡಿ. ಪದವಿಗಾಗಿ 1. Dance, 2. Music, 3. Arts of History ವಿಷಯಗಳಲ್ಲಿ ಸಂಶೋಧನೆ ನಡೆಸಲು ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿ ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಸಂಶೋಧನಾ ಕಾರ್ಯ ನಡೆಸುವ ಕುರಿತು ಲಭ್ಯವಿರುವ ಮೂಲಭೂತ ಹಾಗೂ ಇತರೆ ಅಗತ್ಯ ಸೌಕರ್ಯಗಳ ಪರಿಶೀಲನೆಗಾಗಿ ತಜ್ಞರನ್ನೊಳಗೊಂಡ ಸಮಿತಿಯ ವರದಿಯಲ್ಲಿ ಪರಿಶೀಲನೆ ಮಾಡಿದ ತಜ್ಞರುಗಳ ವಿವರಗಳು ಅಲ್ಲದೇ ಸದರಿ ವಿಷಯಗಳಲ್ಲಿ ಪಿ.ಹೆಚ್.ಡಿ. ಪದವಿ ಮಾಡುತ್ತಿರುವ ಬಗ್ಗೆ ವಿದ್ಯಾರ್ಥಿಗಳ ವಿವರಗಳು ನಮೂದಾಗಿರುವುದಿಲ್ಲ. ಹಾಗೂ ಸರ್ಕಾರದ ಆದೇಶ ಹಾಗು ಸಿಂಡಿಕೇಟ್ ನಿರ್ಣಯವನ್ನು ಪಾಲಿಸುವ |

| | |
|---|---|
| | ದೃಷ್ಠಿಯಿಂದ ಸದರಿ ಕಾಲೇಜಿಗೆ ಮರು ಭೇಟಿ ನೀಡಿ ಇವೆಲ್ಲವನ್ನು ಕೂಲಂಕಷವಾಗಿ ಪರಿಶೀಲಿಸಲು ಕ್ರಮಕೈಗೊಳ್ಳಬೇಕೆಂದು ಕೋರಿದರು. |
| **ತೀರ್ಮಾನ** | ಸಾಧನ ಸಂಗಮ ಟ್ರಸ್ಟ್(ರಿ), ಚನ್ನಪಟ್ಟಣ ತಾಲ್ಲೂಕು, ಕರ್ನಾಟಕ, ಸಂಸ್ಥೆಗೆ ಮರು ಭೇಟಿ ನೀಡಿ ಪರಿವೀಕ್ಷಣಾ ವರದಿಯೊಂದಿಗೆ ಮರುಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/3.15** | Universal Institute For Private Training, Moghera Bin Shoba Street, P.O.Box 6938, Salmiya, Kuwait ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 03 ಕೋರ್ಸುಗಳನ್ನು ಹೊಸದಾಗಿ ಪಾರಂಭಿಸಲು ಮಾನ್ಯತೆ ನೀಡುವ ಸಂಬಂಧ – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | Universal Institute For Private Training, Moghera Bin Shoba Street, P.O.Box 6938, Salmiya, Kuwait ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 03 ಕೋರ್ಸುಗಳನ್ನು ಹೊಸದಾಗಿ ಪಾರಂಭಿಸಲು ಮಾನ್ಯತೆ ನೀಡುವ ಸಂಬಂಧ – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಮತ್ತೊಮ್ಮೆ ಸದರಿ ಕಾಲೇಜಿಗೆ ಭೇಟಿ ನೀಡಿ ವರದಿಯನ್ನು ಮಂಡಿಸಲು ನಿರ್ಣಯಿಸಿತು. |
| **2020/3.16** | ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮಂಡ್ಯ ಜಿಲ್ಲೆ, ಮದ್ದೂರು ತಾ, ಭಾರತೀನಗರದ (ಕೆ.ಎಂ.ದೊಡ್ಡಿ) ಭಾರತೀ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನ ನೀಡುವ ಬಗ್ಗೆ. |
| **ತೀರ್ಮಾನ** | ಯುಜಿಸಿ, ನವದೆಹಲಿಯ ಜಂಟಿ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಎಫ್–22–1/2017(ಎಸಿ), ದಿನಾಂಕ 26–09–2019ರ ಪತ್ರದಲ್ಲಿ ಸ್ವಾಯತ್ತತಾ ಸ್ಥಾನಮಾನ ನೀಡಲು ಅಗತ್ಯ ಕ್ರಮ ಕೈಗೊಂಡು ಪ್ರಕಟಣೆ ನೀಡಲು ತಿಳಿಸಿರುವ ಹಿನ್ನೆಲೆಯಲ್ಲಿ ದಿನಾಂಕ 29–02–2020ರಂದು ಮಂಡ್ಯ ಜಿಲ್ಲೆ, ಭಾರತೀನಗರದ (ಕೆ.ಎಂ.ದೊಡ್ಡಿ) ಭಾರತೀ ಕಾಲೇಜಿಗೆ ಭೇಟಿ ನೀಡಿ ಸ್ವಾಯತ್ತತಾ ಸ್ಥಾನಮಾನ ನೀಡುವ ಬಗ್ಗೆ ಸ್ಥಾಯಿ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/3.17** | ಪ್ರೊ ಲಿಂಗರಾಜ ಗಾಂಧಿ, ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ ಮಂಡ್ಯ ಮತ್ತು ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿಗೆ ಕುಲಸಚಿವ (ಆಡಳಿತ) ಹುದ್ದೆಗೆ ನೇಮಕಗೊಂಡ ಹಿನ್ನಲೆಯಲ್ಲಿ ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವ ಬಗ್ಗೆ. |
| **ತೀರ್ಮಾನ** | ಪ್ರಸ್ತುತ ಘನತೆವೆತ್ತ ಕುಲಾಧಿಪತಿಗಳ ಆದೇಶದ ಮೇರೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ(ಆಡಳಿತ) ಹುದ್ದೆಗೆ ಪ್ರೊ. ಲಿಂಗರಾಜ ಗಾಂಧಿ, ಪ್ರಾಧ್ಯಾಪಕರು ಇವರು ನಿಯೋಜನೆ ಮೇರೆಗೆ ನೇಮಕಗೊಂಡ ಹಿನ್ನೆಲೆಯಲ್ಲಿ ದಿನಾಂಕ 22–01–2020ರಂದು ಮಧ್ಯಾಹ್ನದಿಂದ ಜಾರಿಗೆ ಬಂದಂತೆ ಶ್ರೀಯುತರನ್ನು ಪ್ರಾಧ್ಯಾಪಕ ಹಾಗೂ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಹುದ್ದೆಯ ಕರ್ತವ್ಯದಿಂದ ಘಟನೋತ್ತರವಾಗಿ ಬಿಡುಗಡೆಗೊಳಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| **2020/3.18** | SJB College of Management Studies, BGS Health and Education City,# 67, Dr. Vishnuvardhan road, Kengeri, Bengaluru ಇವರು ಹೊಸದಾಗಿ Management ಮತ್ತು Commerce ವಿಷಯಗಳಲ್ಲಿ ಪಿಹೆಚ್.ಡಿ ಪದವಿಗಾಗಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| **ತೀರ್ಮಾನ** | SJB College of Management Studies, BGS Health and Education City, # 67, Dr. Vishnuvardhan road, Kengeri, Bengaluru ಇವರು ಹೊಸದಾಗಿ Management |

| | |
|---|---|
| | ಮತ್ತು Commerce ವಿಷಯಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಮತ್ತೊಮ್ಮೆ ಸದರಿ ಕಾಲೇಜಿಗೆ ಭೇಟಿ ನೀಡಿ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ನಿರ್ಣಯಿಸಿತು. |
| **2020/3.19** | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಸುನಂದಮ್ಮ ಮತ್ತು ಡಾ. ಸುಮತಿ ಇವರುಗಳ ಮೇಲೆ ಸಲ್ಲಿಸಿರುವ ದೂರಿನ ಬಗ್ಗೆ, ಅತಿಥಿ ಉಪನ್ಯಾಸಕರುಗಳು ವಿದ್ಯಾರ್ಥಿಗಳ ಮೇಲೆ ಸಲ್ಲಿಸಿರುವ ದೂರು ಹಾಗೂ ಈ ಪ್ರಕರಣದ ಸಂಬಂಧ ಮಾನ್ಯ ಕುಲಸಚಿವರು ವಿಭಾಗಕ್ಕೆ ನೀಡಿದ ಸಂಬಂಧದ ಪರಿವೀಕ್ಷಣಾ ವರದಿಯ ಬಗ್ಗೆ. |
| | ಡಾ. ಈ.ಸಿ.ನಿಂಗರಾಜ್ ಗೌಡ ರವರು ಮಾತನಾಡಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಂತೆ ಮಾನಸಗಂಗೋತ್ರಿಯ ಹಲವು ವಿಭಾಗಗಳಲ್ಲಿ ಕೆಲವು ವಿದ್ಯಾರ್ಥಿಗಳು ಹಾಗೂ ಕೆಲವು ಅಧ್ಯಾಪಕರು ಶೈಕ್ಷಣಿಕ ವಾತಾವರಣವನ್ನು ಹಾಳುಮಾಡುವ, ಗೊಂದಲ ಸೃಷ್ಟಿಸುವ, ಸುಳ್ಳು ಸುದ್ದಿಗಳನ್ನು ಹಬ್ಬಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತ ಬರುತ್ತಿದ್ದಾರೆ ಆದುದರಿಂದ ಇವರೆಲ್ಲರ ವಿರುದ್ಧ ಒಂದು ಸಮಿತಿ ರಚಿಸಿ ಸೂಕ್ತ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಶೈಕ್ಷಣಿಕ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಮತ್ತು ಯಾವ ಸಿಂಡಿಕೇಟ್ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡುತ್ತಾರೊ, ಅವರು ವಿಶ್ವವಿದ್ಯಾನಿಲಯ ರಚಿಸುವ ಉಪಸಮಿತಿಯಲ್ಲಿ ಇರಬೇಕೆಂದು ಡಾ. ಈ.ಸಿ. ನಿಂಗರಾಜ್ ಗೌಡ ರವರು ಕೋರಿದರು. |
| **ತೀರ್ಮಾನ** | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಸುನಂದಮ್ಮ ಮತ್ತು ಡಾ. ಸುಮತಿ ಇವರುಗಳ ಮೇಲೆ ಸಲ್ಲಿಸಿರುವ ದೂರಿನ ಬಗ್ಗೆ, ಅತಿಥಿ ಉಪನ್ಯಾಸಕರುಗಳು ವಿದ್ಯಾರ್ಥಿಗಳ ಮೇಲೆ ಸಲ್ಲಿಸಿರುವ ದೂರು ಹಾಗೂ ಈ ಪ್ರಕರಣದ ಸಂಬಂಧ ಮಾನ್ಯ ಕುಲಸಚಿವರು ವಿಭಾಗಕ್ಕೆ ನೀಡಿದ ಸಂಬಂಧದ ಪರಿವೀಕ್ಷಣಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಂಡಿತು.<br><br>1. ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡಿ, ಗಲಾಟೆ ಮಾಡಿಸಿ, ದೂರದಿಂದ ನೋಡುವ ಕೆಲವು ಖಾಯಂ ಉಪನ್ಯಾಸಕರ ನಡವಳಿಕೆಯಿಂದ ವಿಶ್ವವಿದ್ಯಾನಿಲಯಕ್ಕೆ ಮುಜುಗರ ಉಂಟಾಗಿದೆಯೆಂದು ಅಭಿಪ್ರಾಯಿಸಿದ ಸಭೆಯು ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಅತಿಥಿ ಉಪನ್ಯಾಸಕರುಗಳ ನಡುವೆ ಉತ್ತಮ ಬಾಂಧವ್ಯ ಮೂಡುವ ಬಗ್ಗೆ ಕ್ರಮ ಕೈಗೊಳ್ಳಲು; ಹಾಗೂ<br>2. ವಿಭಾಗದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಸತ್ಯಾಸತ್ಯತೆ ತಿಳಿಯಲು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇಬ್ಬರು ಮಹಿಳಾ ಸಿಂಡಿಕೇಟ್ ಸದಸ್ಯರು ಮತ್ತು ಮೂರು ಪುರುಷ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ ಸದರಿ ವಿಭಾಗದಲ್ಲಿ ನಡೆದಿರತಕ್ಕ ಪ್ರಕರಣಗಳನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವ ಸಲುವಾಗಿ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ತೀರ್ಮಾನಿಸಿತು. |
| **2020/3.20** | 2020-2021 ನೇ ಸಾಲಿನ ಆಯವ್ಯಯ ಅಂದಾಜುಗಳು |
| | ಡಾ. ಈ.ಸಿ. ನಿಂಗರಾಜ್ ಗೌಡ ರವರು ಮಾತನಾಡಿ, ವಿಶ್ವವಿದ್ಯಾನಿಯದ ಮಾನಸಗಂಗೋತ್ರಿಯಲ್ಲಿರುವ ಎಲ್ಲಾ ವಿಭಾಗದಲ್ಲಿರುವ ಶೌಚಾಲಯ ಕೊಠಡಿಗಳನ್ನು ನವೀಕರಿಸಬೇಕು, ಶುದ್ಧ ಕುಡಿಯುವ ನೀರನ್ನು |

| | |
|---|---|
| | ಒದಗಿಸಬೇಕು, ಶೌಚಾಲಯ ಕೊಠಡಿಗಳ ಸ್ವಚ್ಚತಾ ಕಾರ್ಯಕ್ಕಾಗಿ ಸ್ವೀಪರ್‌ಗಳನ್ನು ನೇಮಕ ಮಾಡಿಕೊಳ್ಳಬೇಕು, ವಿಶ್ವವಿದ್ಯಾನಿಲಯದಲ್ಲಿರುವ ಎಲ್ಲಾ ವಸತಿನಿಲಯಗಳಿಗೂ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಕಲ್ಪಿಸಿ ಶುಚಿತ್ವವನ್ನು ಕಾಪಾಡಬೇಕು ಹಾಗೂ ಕ್ರಾಫರ್ಡ್ ಭವನದ ಆವರಣದಲ್ಲಿ ಕ್ಯಾಂಟೀನ್ ನಿರ್ಮಿಸಬೇಕೆಂದು ಕೋರಿದರು.<br><br>ಡಾ. ಎಸ್.ಡಿ. ದೊಡ್ಡಚಾರಿ ರವರು ಮಾತನಾಡಿ, ವಿಜ್ಞಾನ ವಿಷಯದಲ್ಲಿ ಅಧ್ಯಯನ ಮಾಡುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಿ, ಅವರಿಗೆ ಫೆಲೋಶಿಫ್ ನೀಡುವುದರ ಮೂಲಕ ವಾರ್ಷಿಕ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡಬೇಕೆಂದರು.<br><br>ಡಾ. ಎಂ.ಎಸ್.ದಾಮೋದರ ರವರು ಮಾತನಾಡಿ, ಹಾಸನದ ಹೇಮಾಗಂಗೋತ್ರಿಯಲ್ಲಿ ಸಮುದಾಯ ಭವನವನ್ನು ನಿರ್ಮಾಣ ಮಾಡಬೇಕೆಂದರು.<br><br>2020–2021ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಅನುದಾನ ರೂ. 157,92,00,000–00 ಹಾಗೂ ಆಂತರಿಕ ಸಂಪನ್ಮೂಲಗಳಿಂದ ಬರಬಹುದಾದ ಆಂತರಿಕ ಆದಾಯದ ಒಟ್ಟು ರೂ. 125,50,00,000–00ಗಳಾಗಿದ್ದು, ಒಟ್ಟಾರೆ ನಿರೀಕ್ಷಿತ ಆದಾಯಗಳನ್ನು ಸೇರಿಸಿ ರೂ.387,18,94,751–00ಗಳಾಗಿರುತ್ತದೆ. 2020–21ನೇ ಸಾಲಿನ ವೆಚ್ಚ ರೂ. 392,76,83,000/–ಗಳಾಗಿದ್ದು, ಸದರಿ ಸಾಲಿಗೆ ರೂ.(–)5,57,88,249/–ಗಳ ಕೊರತೆ ಆಯವ್ಯಯ ವಿವರವುಳ್ಳ ಪಟ್ಟಿಯನ್ನು ಸಭೆಯು ಪರಿಶೀಲಿಸಿತು. ಹಾಗೂ ರಾಜ್ಯ ಸರ್ಕಾರ ಅಭಿವೃದ್ಧಿ ಅನುದಾನವಾಗಿ 2020–2021ನೇ ಸಾಲಿಗೆ ಮಂಜೂರಾಗಿರುವ ರೂ. 50,00,000–00ಗಳ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿತು.<br><br>1. ವಿಶ್ವವಿದ್ಯಾನಿಯದ ಮಾನಸಗಂಗೋತ್ರಿಯಲ್ಲಿರುವ ಎಲ್ಲಾ ವಿಭಾಗದಲ್ಲಿರುವ ಶೌಚಾಲಯ ಕೊಠಡಿಗಳನ್ನು ನವೀಕರಿಸುವುದು.<br>3. ಕುಡಿಯುವ ನೀರನ್ನು ಒದಗಿಸಲು ಅಗತ್ಯ ಕ್ರಮಕೈಗೊಳ್ಳುವುದು.<br>4. ಶೌಚಾಲಯ ಕೊಠಡಿಗಳ ಸ್ವಚ್ಚತಾ ಕಾರ್ಯಕ್ಕಾಗಿ ಸ್ವೀಪರ್‌ಗಳನ್ನು ನೇಮಕ ಮಾಡಿಕೊಳ್ಳುವುದು.<br>5. ವಿಶ್ವವಿದ್ಯಾನಿಲಯದಲ್ಲಿರುವ ಎಲ್ಲಾ ವಸತಿನಿಲಯಗಳಿಗೂ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಹಾಗೂ ಶುಚಿತ್ವವನ್ನು ಕಾಪಾಡುವುದು.<br>6. ವಿಜ್ಞಾನ ವಿಷಯದಲ್ಲಿ ಅಧ್ಯಯನ ಮಾಡುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಿ, ಅವರಿಗೆ ಫೆಲೋಶಿಫ್ ನೀಡುವುದರ ಮೂಲಕ ವಾರ್ಷಿಕ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವುದು.<br>7. ವಿ.ವಿ. ನೌಕರರ ಮನವಿ ಮೇರೆಗೆ ಸಮುಧಾಯ ಭವನವನ್ನು ನಿರ್ಮಾಣ ಮಾಡುವುದು. ಕ್ರಾಫರ್ಡ್ ಭವನದ ಆವರಣದಲ್ಲಿ ಕ್ಯಾಂಟೀನ್ ನಿರ್ಮಿಸುವುದು. |
| **ತೀರ್ಮಾನ** | 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜಿನಲ್ಲಿ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ಲಭ್ಯವಿರುವ ಇತರೆ ಶೀರ್ಷಿಕೆಗಳಿಂದ ಪುನರ್ವಿನಿಯೋಗ ಮಾಡುವ ವಿಷಯ ಮತ್ತು 2020–21ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ದಿನಾಂಕ 18–03–2021ರಂದು ನಡೆದ ಹಣಕಾಸು ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿರುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2020/3.21** | ಎರಡು ಹೊಸ Innova Crysta –G Plus ಕಾರುಗಳನ್ನು ಖರೀದಿಸಿರುವ ಬಗೆಗೆ. |
| **ತೀರ್ಮಾನ** | ದಿ. 16.11.2018 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಉಪಯೋಗಕ್ಕಾಗಿ Honda City ಮತ್ತು Innova Cysta ಈ ಎರಡು ಕಾರುಗಳನ್ನು ನಿಯಮಾನುಸಾರ ಖರೀದಿಸಲು ತೀರ್ಮಾನಿಸಲಾಗಿತ್ತು. ಆದರೆ ಇವುಗಳ ಬದಲಿಗೆ ಕರ್ನಾಟಕ ಸರ್ಕಾರದ ಆದೇಶ ಸಂ.ಸಿಆಸುಇ 111 ಶಿವಾನೀ 2011, ಬೆಂಗಳೂರು ದಿನಾಂಕ 09–05–2013ರ ಪ್ರಕಾರ ರೂ.9.00 ಲಕ್ಷ(ತೆರಿಗೆ ಹೊರತು ಪಡಿಸಿ) ಆರ್ಥಿಕ ಮಿತಿಗೊಳಪಟ್ಟು ಎರಡು Innova Crysta-G ಕಾರುಗಳನ್ನು Govt e-Market(GeM) ಮುಖಾಂತರ ಖರೀದಿಸಿರುವುದನ್ನು ಮತ್ತು ಸದರಿ ವೆಚ್ಚವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲವಾದ IIDF ಶೀರ್ಷಿಕೆಯಿಂದ ಭರಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2020/3.22** | ಎನ್.ಸಿ.ಸಿ. ಕೆಡೆಟ್‌ಗಳಿಗೆ Small Arms Firing Range Course ನಡೆಸಲು ವಿಶ್ವವಿದ್ಯಾನಿಲಯದ ಆವರಣದಲ್ಲಿ ಜಾಗ ನೀಡುವ ಬಗ್ಗೆ. |
| **ತೀರ್ಮಾನ** | **NCC Group Headquarter, Vinoba Road, Mysuru** ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಂದಾಜು **40' x25' ಜಾಗದಲ್ಲಿ Small Arms Firing Range Course** ನಡೆಸಲು ಅವಶ್ಯವಿರುವ ಜಾಗವನ್ನು ಬಳಸಿಕೊಳ್ಳಲು ಅನುವಾಗುವಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/3.23** | 2020-21ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ರಚನೆ ಮಾಡಿರುವ ವಿವಿಧ ಪರೀಕ್ಷಾ ಮಂಡಳಿಗಳ ಬಗ್ಗೆ. |
| **ತೀರ್ಮಾನ** | 2020–21ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳು ಏಪ್ರಿಲ್/ಮೇ–2020 ಮಾಹೆಯಿಂದ ಪ್ರಾರಂಭಗೊಳ್ಳಲಿರುವ ಹಿನ್ನೆಲೆಯಲ್ಲಿ ಪ್ರಶ್ನೆಪತ್ರಿಕೆಗಳನ್ನು ತುರ್ತಾಗಿ ಸಿದ್ಧಪಡಿಸಬೇಕಾಗಿರುವುದರಿಂದ, ವಿಶ್ವವಿದ್ಯಾನಿಲಯದ ಕಾಯ್ದೆ 2000, ಪ್ರಕರಣ 36ರ ಅನ್ವಯ, ಬಿಓಇ ಶಿಫಾರಸ್ಸು ಮಾಡಿರುವ ವಿವಿಧ ಪರೀಕ್ಷಾ ಮಂಡಳಿಗಳ (ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡಂತೆ) ಅಧಿಸೂಚನೆಗಳನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2020/3.24** | ಪ್ರೊ. ಸದಾನಂದ ಎಂ. ಯಮಕನಮರಡಿ, ನಿವೃತ್ತ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| **ತೀರ್ಮಾನ** | ಅಧ್ಯಕ್ಷರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಪ್ರೊ.ಎಚ್.ಎನ್.ಯಜುರ್ವೇದಿ ಅವರ ಸಂದರ್ಶಕ ಪ್ರಾಧ್ಯಾಪಕರ ಅವಧಿಯು ಮುಗಿದಿರುವುದರಿಂದ ಇವರ ಬದಲಿಗೆ ಪ್ರೊ. ಸದಾನಂದ ಎಂ.ಯಮಕನಮರಡಿ ಅವರ ವಿಶೇಷ ತಜ್ಞತೆಯ ಅಗತ್ಯತೆಯಿರುವುದರಿಂದ ಅವರನ್ನು ನೇಮಿಸುವಂತೆ ಕೋರಿರುವುದರಿಂದ ಪ್ರೊ. ಸದಾನಂದ ಎಂ.ಯಮಕನಮರಡಿ ಅವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ. 25,000/–ಗಳ ಗೌರವ ಸಂಭಾವನೆಯೊಂದಿಗೆ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **2020/3.25** | ಡಾ. ಈ. ಸಿ. ನಿಂಗರಾಜ್ ಗೌಡ ಮತ್ತು ಡಾ. ಎಂ.ಎಸ್. ದಾಮೋಧರ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರುಗಳು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ. |
| | **1. ಉತ್ಕೃಷ್ಟ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಮತ್ತು ವಸತಿ ನಿಲಯವನ್ನು ಪ್ರಾರಂಭಿಸಬೇಕೆಂದು ಕೋರಿ.**<br>ಡಾ. ಈ.ಸಿ. ನಿಂಗರಾಜ್ ಗೌಡ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು 100 ವರ್ಷಗಳನ್ನು ಪೂರೈಸಿರುವುದರಿಂದ ಅದರ ಸವಿನೆನಪಿಗಾಗಿ ವಿಶ್ವವಿದ್ಯಾನಿಲಯದಿಂದ |

| | |
|---|---|
| | ತೇರ್ಗಡೆಹೊಂದುವ ವಿದ್ಯಾರ್ಥಿಗಳು ಮತ್ತು ಇತರೆ ಎಲ್ಲಾ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಭಾರತ ದೇಶದಲ್ಲಿಯೇ ಮಾದರಿಯಾಗುವಂತಹ ಉತ್ಕೃಷ್ಟ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ (Excellent Competitive Exam Coaching Center) ಮತ್ತು ವಸತಿನಿಲಯವನ್ನು ಪ್ರಾರಂಭಿಸಬೇಕೆಂದು ಕೋರಿದರು.<br><br>ಈ ಕೇಂದ್ರದಲ್ಲಿ ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ **IAS, KAS, FDA** ಹುದ್ದೆಗಳಿಗಾಗಿ ವಿದ್ಯಾರ್ಥಿಗಳಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ಇದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿ ಇತರೆ ವಿಶ್ವವಿದ್ಯಾನಿಲಯಗಳಿಗೆ ಮಾದರಿಯಾಗಬಹುದು ಹಾಗೂ ನ್ಯಾಕ್ ತಂಡವು ಭೇಟಿ ನೀಡುವ ವೇಳೆ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅಂಕಗಳನ್ನು ಗಳಿಸಲು ಸಾಧ್ಯವಾಗುತ್ತದೆಂದು ತಿಳಿಸಿದರು.<br><br>ಮೇಲ್ಕಂಡ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸಭೆಯು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಸ್ಥಾಪಿಸಲು ನಿರ್ಣಯಿಸಲಾಗಿದ್ದು ಈ ಉದ್ದೇಶಕ್ಕಾಗಿ ಕೆರಿಯರ್ ಹಬ್ ಅಲ್ಲಿ ಒದಗಿಸಲಾಗಿರುವ ಅನುದಾನವನ್ನು ಬಳಸಲಾಗುವುದು. ಅನುದಾನವನ್ನು ಸೂಕ್ತವಾದ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಲು ನುರಿತ ಅಧ್ಯಾಪಕರುಗಳುಳ್ಳ ಹಾಗೂ ಸಿಂಡಿಕೇಟ್ ಸದಸ್ಯರ ಒಂದು ಸಮಿತಿ ರಚನೆ ಮಾಡಿ, ಕಾರ್ಯಕ್ರಮಗಳನ್ನು ಜಾರಿಗೆ ತರಲು ಹಾಗೂ ಕೋ–ಆರ್ಡಿನೇಟರ್ ನೇಮಕ ಮಾಡಿಕೊಳ್ಳುವ ಬಗ್ಗೆ ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು. ಮತ್ತು ವಸತಿ ನಿಲಯವನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ತಿಳಿಸುತ್ತಾ, ಈ ದಿಸೆಯಲ್ಲಿ ಉತ್ಕೃಷ್ಟ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಮತ್ತು ವಸತಿ ನಿಲಯವನ್ನು ಪ್ರಾರಂಭಿಸುವುದರ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಗೆ ವಿವರವಾದ ಮಾಹಿತಿಯೊಂದಿಗೆ, ಪುನಃ ಈ ವಿಷಯವನ್ನು ಮಂಡಿಸುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು.<br><br>**2. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸೌಲಭ್ಯವನ್ನು ಒದಗಿಸುವ ಬಗ್ಗೆ.**<br><br>ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸೌಲಭ್ಯವನ್ನು ಒದಗಿಸುವಂತೆ ಪ್ರಸ್ತಾವನೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಅನುಮೋದನೆ ಬಂದ ಕೂಡಲೇ ಎಲ್ಲಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸೌಲಭ್ಯವನ್ನು ಒದಗಿಸಲಾಗುವುದೆಂದು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. |
| | ಡಾ. ಎಂ.ಎಸ್.ದಾಮೋದರ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಇ–ಮೇಲ್ ಪತ್ರದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಪ್ರತಿಮೆ ಸ್ಥಾಪನೆಯನ್ನು ಮಾರ್ಚ್ ತಿಂಗಳ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಪಟ್ಟಿಗೆ ಸೇರಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಸಿಂಡಿಕೇಟ್ ಸಭೆಯು ಒಪ್ಪಿ, ಕ್ರಾಫಡ್ ಹಾಲ್ ಆವರಣದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಸ್ಥಾಪಿಸಲು ಸರ್ಕಾರಕ್ಕೆ ಪತ್ರ ಬರೆದು ಅನುಮತಿ ಪಡೆದು ಪ್ರತಿಷ್ಠಾಪಿಸುವಂತೆ ಅಭಿಪ್ರಾಯ ವ್ಯಕ್ತವಾಯಿತು. |
| **ತೀರ್ಮಾನ** | ಉತ್ಕೃಷ್ಟ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಮತ್ತು ವಸತಿ ನಿಲಯವನ್ನು ಪ್ರಾರಂಭಿಸುವುದು ಉತ್ತಮ ಸಲಹೆಯಾಗಿದ್ದು ಈ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಗೆ ಸವಿವರವಾದ ಮಾಹಿತಿಯೊಂದಿಗೆ, ಪುನಃ ಈ ವಿಷಯವನ್ನು ಮರುಮಂಡಿಸಲು ಹಾಗೂ ಕ್ರಾಫಡ್ ಹಾಲ್ ಆವರಣದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ಸರ್ಕಾರಕ್ಕೆ ಪತ್ರ ಬರೆದು ಅನುಮತಿ ಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2020/3.26** | Elevation of the Post of System Coordinator as Director, ICD and appointment of System Coordinator to ICD. |
| | Prof. Suresha, Chairman, DOS in Computer Science, Manasagangotri, Mysuru is working as System Coordinator of ICD taking care of the whole administration and Technology, The position of Director in the ICD of University is yet to be filled up and it is proposed to elevate Prof. Suresha as Director from the position of System Co-ordinator to the position of Director, ICD. The person who is having Doctorate Degree in Computer Science with minimum of two years experience in system maintenance and research will be appointed as system coordinator of ICD. The person so appointed as System coordinator will be paid a consolidated salary of Rs.50,000/- per month for a period of one year duration or until further orders. |
| **ತೀರ್ಮಾನ** | **The syndicate approved the subject related to elevating of Prof. Suresha as Director,** from the position of System Co-ordinator to the position of Director, ICD **and further the appointment of System Coordinator to ICD who is** having Doctorate Degree in Computer Science with minimum of two years experience in system maintenance and research will be appointed as system coordinator of ICD with consolidated salary of Rs.50,000/- per month for a period of one year duration or until further orders. |
| **2020/3.27** | ಅಧ್ಯಯನ ಮಂಡಳಿಗಳನ್ನು ಹೊಸದಾಗಿ ರಚಿಸುವ ಬಗ್ಗೆ. |
| **ತೀರ್ಮಾನ** | ಅಧ್ಯಯನ ಮಂಡಳಿಗಳನ್ನು ಹೊಸದಾಗಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/3.28** | International Institute for Assisted Reproductive Technology and Research Centre, Mysuru ಸಂಸ್ಥೆಯ ಈಗಾಗಲೇ Specialized Programme ಅಡಿಯಲ್ಲಿ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸುತ್ತಿರುವ M.Sc. (Assisted Reproduction & Embryology) ಕೋರ್ಸಿಗೆ ಹೆಚ್ಚುವರಿಯಾಗಿ 20 ಸೀಟುಗಳಿಗೆ ಅನುಮತಿ ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನ್ವಯ International Institute for Assisted Reproductive Technology and Research Centre, Mysuru, ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ನಡೆಸಲಾಗುತ್ತಿರುವ M.Sc(Assisted Reproduction & Embryology) ಕೋರ್ಸಿಗೆ 2020–21ನೇ ಸಾಲಿನಿಂದ ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಗೆ ಅನುಮತಿ ನೀಡುವ ಬಗೆಗಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/3.29** | Community Radio Station ವಾರ್ಷಿಕ ನಿರ್ವಹಣೆಗೆ ಅಗತ್ಯವಿರುವ ಕರಡು ವಾರ್ಷಿಕ ಆಯವ್ಯಯ ಪಟ್ಟಿಯನ್ನು ಅನುಮೋದನೆಗೆ ಸಲ್ಲಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ Community Radio Station ಸ್ಥಾಪನೆ ಮಾಡುವ ಸಂಬಂಧ, ಸಂಯೋಜಕರು ನೀಡಿರುವ ವಾರ್ಷಿಕ ಆಯವ್ಯಯದ ಕರಡು ಪಟ್ಟಿಯನ್ನು ಸಿಂಡಿಕೇಟ್ |

| | |
|---|---|
| | ಅನುಮೋದಿಸಿತು. |
| **2020/3.30** | ದೂರಶಿಕ್ಷಣದಡಿಯಲ್ಲಿ ನೂತನ ಕಲಿಕಾ ಕೇಂದ್ರದೊಡನೆ ಮಾಡಿಕೊಳ್ಳುವ ಒಡಂಬಡಿಕೆಯ ಸ್ವರೂಪ (Format) ಅನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಪದ್ಧತಿಯಲ್ಲಿ ನೂತರ ಕಲಿಕಾ ಕೇಂದ್ರಗಳಿಗೆ ಸಂಯೋಜನೆಯನ್ನು ನೀಡುವ ಸಂಬಂಧ, ಮೈಸೂರು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಸೂಚನೆಯಂತೆ, ಅವಶ್ಯ ಅಂಶಗಳೊಡನೆ ಮೈಸೂರು ವಿಶ್ವವಿದ್ಯಾನಿಲಯದ ಜೊತೆಗೆ ಮಾಡಿಕೊಳ್ಳುವ ಸಲುವಾಗಿ ಸಿದ್ದಪಡಿಸಲಾದ ಒಡಂಬಡಿಕೆಯ ಮಾದರಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/3.31** | ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. |
| | ಡಾ. ಈ.ಸಿ. ನಿಂಗರಾಜ್ ಗೌಡ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಉದ್ಯೋಗಿಗಳ ವಿದ್ಯಾರ್ಹತೆ, ಸೇವಾನುಭವ, ಹಿರಿತನ ಇನ್ನೂ ಮುಂತಾದ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಪದೋನ್ನತಿ ನೀಡುವುದರ ಬಗ್ಗೆ ವಿಷಯನ್ನು ಪುನಃ ಮಂಡಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ದಿನಾಂಕ 05-03-2020 ರಂದು ಪದೋನ್ನತಿ ಸಮಿತಿ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರಾದ ಶ್ರೀ.ಆರ್.ಪಿ.ಶಿವಲಿಂಗಪ್ರಸಾದ್ ಅವರನ್ನು ಸಂದರ್ಶಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅವರ ವಿದ್ಯಾರ್ಹತೆ, ಸೇವಾನುಭವ ಇತ್ಯಾದಿ ಪರಿಶೀಲಿಸಿ, ಸದರಿರವರನ್ನು ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿದ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಉದ್ಯೋಗಿಗಳ ವಿದ್ಯಾರ್ಹತೆ, ಸೇವಾನುಭವ, ಹಿರಿತನ ಇನ್ನೂ ಮುಂತಾದ ವಿವರಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ, ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತೀರ್ಮಾನಿಸಿ ಮುಂದೂಡಲಾಯಿತು |

**ಇತರೆ ವಿಷಯಗಳು:**

1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1), ಕರ್ನಾಟಕ ಸರ್ಕಾರದ ಸಚಿವಾಲಯ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂ.ಇಡಿ 139 ಯಎನ್ಇ 2020, ದಿನಾಂಕ 21-03-2020 ಪತ್ರದ ಆದೇಶಾನುಸಾರ, ದೇಶಾದ್ಯಾಂತ ಹರಡುತ್ತಿರುವ Covid-19 ವೈರಾಣುವಿನ ಹರಡುವಿಕೆಯನ್ನು ತಡೆಗಟ್ಟಲು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ವಿಶ್ವವಿದ್ಯಾನಿಲಯಗಳು ಹಾಗೂ ಅವುಗಳ ಅಧೀನಕ್ಕೊಳಪಡುವ ಕಾಲೇಜು ವಿಭಾಗ ಹಾಗೂ ಸಂಸ್ಥೆಗಳು ಅರಿವು ಮೂಡಿಸುವ ಸಲುವಾಗಿ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ ದಿನಾಂಕ 23-03-2020ರ ಅಪರಾಹ್ನದಿಂದ 31-03-2020ರವರೆಗೆ ರಜೆಯನ್ನು ಘೋಷಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು.

2. ಮಾನ್ಯ ಸಿಂಡಿಕೇಟ್ ಸದಸ್ಯರೆಲ್ಲರ ಅಭಿಪ್ರಾಯದ ಮೇರೆಗೆ, ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವ ಕಾರ್ಯಸೂಚಿಯ ವಿಷಯಗಳನ್ನು ಸಭೆಯ ದಿನಾಂಕದ ಒಂದು ವಾರಕ್ಕಿಂತ ಮುಂಚೆ ಸಿದ್ದಪಡಿಸಿ ಕಳುಹಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ಸಲ್ಲಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು